ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 961
ಮಾನ್ಯ ಸದಸ್ಯರ ಹೆಸರು : ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಪರಿಸರ ಹಾಗೂ ಜೀವಿಶಾಸ್ತ್ರ, ಸಚಿವರು
ಉತ್ತರಿಸುವ ದಿನಾಂಕ : 15.03.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಪ್ರವಾಸೋದ್ಯಮ ಇಲಾಖೆಯಡಿಯಲ್ಲಿ ಸ್ವಯಂ ಉದ್ಯೋಗಕ್ಕಾಗಿ ಟ್ಯಾಕ್ಸಿ ನಡೆಸಲು ರಿಯಾಯಿತಿ ದರದಲ್ಲಿ ವಾಹನಗಳನ್ನು ಪಡೆಯಲು ಫಲಾನುಭವಿಗೆ ಇರಬೇಕಾದ ಅರ್ಹತೆಗಳೇನು ;	ಪ್ರವಾಸೋದ್ಯಮ ಇಲಾಖೆಯಡಿಯಲ್ಲಿ ಸ್ವಯಂ ಉದ್ಯೋಗಕ್ಕಾಗಿ ಪ್ರವಾಸಿ ಟ್ಯಾಕ್ಸಿ ಯೋಜನೆಯಡಿಯಲ್ಲಿ ಪ್ರವಾಸಿ ಟ್ಯಾಕ್ಸಿ ಖರೀದಿಸಲು ಫಲಾನುಭವಿಗಳಿಗೆ ನಿಗಧಿಪಡಿಸಿರುವ ಅರ್ಹತೆ, ಮಾನದಂಡಗಳು ಮತ್ತು ಷರತ್ತುಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.
ಆ)	ಈ ವಾಹನಗಳನ್ನು ನೀಡಲು ಇಲಾಖೆಯು ಅನುಸರಿಸುವ ಮಾನದಂಡಗಳೇನು; (ವಿವರ ನೀಡುವುದು)	
ಇ)	ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೀಡಲಾಗಿರುವ ವಾಹನಗಳು ಮತ್ತು ಅದಕ್ಕಾಗಿ ನೀಡಲಾದ ಅನುದಾನ ಬಗ್ಗೆ ವಿವರ ಹಾಗೂ ಫಲಾನುಭವಿಗಳ ವಿವರದೊಂದಿಗೆ ಮಾಹಿತಿ ಒದಗಿಸುವುದು ;	ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ 48 ಟ್ಯಾಕ್ಸಿ ವಾಹನಗಳನ್ನು ನೀಡಲಾಗಿದ್ದು, ಮತ್ತು ಅದಕ್ಕಾಗಿ ನೀಡಲಾದ ಅನುದಾನ ವಿವರಗಳು ಈ ಕೆಳಗಿನಂತಿವೆ.

(ರೂ.ಲಕ್ಷಗಳಲ್ಲಿ)

ವರ್ಷ	ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ		ಹಿಂದುಳಿದ ಹಾಗೂ ಅಲ್ಪಸಂಖ್ಯಾತರು	
	ವಾಹನ ಸಂಖ್ಯೆ	ಅನುದಾನ	ವಾಹನ ಸಂಖ್ಯೆ	ಅನುದಾನ	ವಾಹನ ಸಂಖ್ಯೆ	ಅನುದಾನ
2017-18	8	24,00,000.00	4	12,00,000.00	12	36,00,000.00
2018-19	7	21,00,000.00	3	9,00,000.00	5	15,00,000.00
2019-20	3	9,00,000.00	1	3,00,000.00	5	15,00,000.00
ಒಟ್ಟು	18	54,00,000.00	8	24,00,000.00	22	66,00,000.00

ಆಯ್ಕೆಯಾದ ಫಲಾನುಭವಿಗಳ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ.

ಕ್ರ. ಸಂ	ಪ್ರಶ್ನೆ	ಉತ್ತರ
ಈ	ಈ ವಾಹನಗಳನ್ನು ಸರ್ಕಾರವು ನೀಡಿದ ನಂತರ ಅವರುಗಳು ಅನುಸರಿಸಬೇಕಾದ ಮಾರ್ಗಸೂಚಿಗಳೇನು ? (ವಿವರ ನೀಡುವುದು)	ಅನುಬಂಧ-1ರಲ್ಲಿ ಒದಗಿಸಿದೆ.

ಸಂಖ್ಯೆ: ಟಿಓಆರ್ 37 ಟಿಡಿವಿ 2021.

(ಸಿ.ಪಿ. ಯೋಗೇಶ್ವರ)
ಪ್ರವಾಸೋದ್ಯಮ, ಪರಿಸರ ಹಾಗೂ ಜೀವಿಶಾಸ್ತ್ರ, ಸಚಿವರು

ಅನುಬಂಧ - 1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದ ನಿರುದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸುವ ಸಂಬಂಧ ಮಾರ್ಗಸೂಚಿಗಳು

ಓದಲಾಗಿದೆ: ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆರವರ ಕಡತ ಸಂಖ್ಯೆ: ಪ್ರಇ/ಯೋ-1/26/2016-17.

....

ಪ್ರಸ್ತಾವನೆ:

ಮೇಲೆ ಓದಲಾದ ಕಡತದಲ್ಲಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆರವರು 2016-17ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ನಿರುದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಡಲು, ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ವಿತರಿಸುವ ಸಂಬಂಧ ಸಿದ್ಧಪಡಿಸಿರುವ ಪರಿಷ್ಕೃತ ಮಾರ್ಗಸೂಚಿಗಳಿಗೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ

ಸರ್ಕಾರದ ಆದೇಶ ಸಂಖ್ಯೆ:ಪ್ರಇ 243 ಪ್ರವಾಯೋ 2016 ದಿನಾಂಕ:8-9-2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2016-17ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ನಿರುದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಡಲು, ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ವಿತರಿಸುವ ಸಂಬಂಧ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿನ ಪರಿಷ್ಕೃತ ಮಾರ್ಗಸೂಚಿಗಳಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎನ್.ಯತಿರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಇವರಿಗೆ:

1. ಮಹಾಲೇಖಪಾಲರು(ಲೆಕ್ಕಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಖನಿಜ ಭವನ, ಬೆಂಗಳೂರು.
3. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ.
4. ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಪ್ರಇ 243 ಪ್ರವಾಯೋ 2016 ದಿನಾಂಕ: 8-9-2016ಕ್ಕೆ ಅನುಬಂಧ.

2016-17ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ವಿತರಿಸುವ ಸಂಬಂಧ ತಯಾರಿಸಿರುವ ಮಾರ್ಗಸೂಚಿಗಳು.

ಯೋಜನೆ:

- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಲಘು ವಾಹನ ಚಾಲನಾ ಪರವಾನಗಿ ಹೊಂದಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಅರ್ಹ ನಿರುದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳುವ ದೃಷ್ಟಿಯಿಂದ ಪ್ರವಾಸಿ ತಾಣಗಳಿಗೆ ಪ್ರವಾಸಿಗರನ್ನು ಕರೆದುಕೊಂಡು ಹೋಗಲು ಸಹಾಯಧನದ ಮೂಲಕ ಪ್ರವಾಸಿ ಟ್ಯಾಕ್ಸಿಗಳನ್ನು ಒದಗಿಸುವುದು.

ಯೋಜನೆಯ ಘಟಕ ವೆಚ್ಚ:

ಫಲಾನುಭವಿಯು ಸ್ವ-ಇಚ್ಛೆಯಿಂದ ಯಾವುದೇ ಮಾದರಿಯ ವಾಹನವನ್ನು ಖರೀದಿಸಬಹುದು. ಈ ವಾಹನದ ಘಟಕ ವೆಚ್ಚದ ವಿವರವು ಕೆಳಕಂಡಂತಿದೆ.

- ಇಲಾಖೆಯ ಸಹಾಯದನ ರೂ.2.00 ಲಕ್ಷಗಳು ಮಾತ್ರ.
- ಫಲಾನುಭವಿಯ ವಂತಿಗೆ - ವಾಹನದ ಒಟ್ಟು ವೆಚ್ಚದ ಶೇ.5 ರಷ್ಟು.
- ಬ್ಯಾಂಕ್ ಸಾಲ - ವಾಹನದ ಒಟ್ಟು ವೆಚ್ಚದಲ್ಲಿ ಉಳಿದ ಮೊತ್ತ.

ಜಿಲ್ಲಾವಾರು ಗುರಿ :

ಇಲಾಖೆಯಿಂದ ಪ್ರತಿ ಜಿಲ್ಲೆಗೆ ನಿಗದಿಪಡಿಸಿದ ಅಭ್ಯರ್ಥಿಗಳ ಗುರಿಯನ್ನು ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯ ತಾಲ್ಲೂಕುವಾರು ಜನಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸುವುದು. ಈ ಗುರಿಯನ್ನು ಜಿಲ್ಲೆಯಲ್ಲಿರುವ ಲೀಡ್ ಬ್ಯಾಂಕ್(ಡಿ.ಎಲ್.ಬಿ.ಸಿ)ಗೆ ರವಾನಿಸಿ ಬ್ಯಾಂಕ್ ಸಾಲ ಮಂಜೂರು ಮಾಡಿಸಲು ಕ್ರಮ ವಹಿಸುವುದು.

ಪ್ರವಾಸಿ ಟ್ಯಾಕ್ಸಿ ವಿತರಣೆ ಪ್ರಕ್ರಿಯೆ ಕಾಲಾವಧಿ :

ಕ್ರ.ಸಂ.	ಪ್ರಕ್ರಿಯೆ	ದಿನಾಂಕ
1	ಅರ್ಜಿ ಆಹ್ವಾನಿಸಲು ಪತ್ರಿಕಾ ಪ್ರಕಟಣೆ ಹೊರಡಿಸುವುದು	
2	ಅರ್ಜಿ ವಿತರಣೆ	
3	ಅರ್ಜಿ ಸ್ವೀಕರಿಸುವುದು	
4	ಸ್ವೀಕರಿಸಿದ ಅರ್ಜಿಗಳ ಪರಿಶೀಲನೆ	
5	ಪರಿಶೀಲಿಸಿದ ಅರ್ಜಿಗಳ ಪಟ್ಟಿಯನ್ನು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆ ಕರೆದು ಸಮಿತಿಯ ಮುಂದೆ ಮಂಡಿಸಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು.	ಪ್ರವಾಸೋದ್ಯಮ ನಿರ್ದೇಶಕರು ನಿರ್ಧರಿಸುವುದು.
6	ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ಹಾಗೂ ಆಕ್ಷೇಪಣೆ ಆಹ್ವಾನ	
7	ಸ್ವೀಕರಿಸಿದ ಆಕ್ಷೇಪಣೆಗಳ ಇತ್ಯರ್ಥಪಡಿಸುವುದು	

ಕ್ರ ಸಂ	ಪ್ರಕ್ರಿಯೆ	ದಿನಾಂಕ
8	ಅಂತಿಮ ಫಲಾನುಭವಿಗಳ ಆಯ್ಕೆ ಪಟ್ಟಿ ಪ್ರಕಟಣೆ	ಪ್ರವಾಸೋದ್ಯಮ ನಿರ್ದೇಶಕರು ನಿರ್ಧರಿಸುವುದು.
9	ಫಲಾನುಭವಿಗಳ ಪಟ್ಟಿಯನ್ನು ಬ್ಯಾಂಕ್ ಸಾಲ ಒದಗಿಸಲು ಬ್ಯಾಂಕ್‌ಗೆ ಸಲ್ಲಿಸುವುದು	
10	ಬ್ಯಾಂಕ್ ಸಾಲ ಮಂಜೂರಾದ ನಂತರ ಇಲಾಖೆಯು ಸಹಾಯಧನವನ್ನು ಬ್ಯಾಂಕ್‌ಗೆ ಜಮಾ ಮಾಡುವುದು	
11	ಪ್ರವಾಸಿ ಟ್ಯಾಕ್ಸಿ ವಿತರಣೆ	
12	ಪ್ರವಾಸಿ ಟ್ಯಾಕ್ಸಿ ವಿತರಣೆ ಮಾಡಿರುವ ಬಗ್ಗೆ ಇಲಾಖೆಗೆ ವರದಿ ಸಲ್ಲಿಸಲು ಕೊನೆಯ ದಿನ	

ಆಯ್ಕೆ ಸಮಿತಿ :

ಫಲಾನುಭವಿಗಳ ಅರ್ಹತಾ ಪಟ್ಟಿ ಆಯ್ಕೆ ಮಾಡುವ ಸಮಿತಿ

ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವುದು.

1. ಉಪ ವಿಭಾಗಾಧಿಕಾರಿಗಳು- ಅಧ್ಯಕ್ಷರು.
2. ತಹಸೀಲ್ದಾರ್ (ಆಯಾ ಜಿಲ್ಲಾ ಕೇಂದ್ರ ಸ್ಥಾನದಲ್ಲಿರುವವರು).
3. ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು-ಸದಸ್ಯ ಕಾರ್ಯದರ್ಶಿಗಳು
4. ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ, ಡಿಎಸ್‌ಡಬ್ಲ್ಯು -ಸದಸ್ಯರು.
5. ಜಿಲ್ಲಾ ಸಮಗ್ರ ಗಿರಿಜನ ಅಭಿವೃದ್ಧಿ ಅಧಿಕಾರಿ-ಸದಸ್ಯರು.
6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ (ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ)-ಸದಸ್ಯರು
7. ಪ್ರಾದೇಶಿಕ ಸಾರಿಗೆ ಅಧಿಕಾರಿ - ಸದಸ್ಯರು.
8. ವ್ಯವಸ್ಥಾಪಕರು. ಲೀಡ್ ಬ್ಯಾಂಕ್ - ಸದಸ್ಯರು.
9. ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧಿಕಾರಿ - ಸದಸ್ಯರು.
10. ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮದ ಅಧಿಕಾರಿ - ಸದಸ್ಯರು.

ಆಯ್ಕೆ ವಿಧಾನ:

- ಫಲಾನುಭವಿಗಳ ಆಯ್ಕೆಯಲ್ಲಿ ಅಭ್ಯರ್ಥಿಯ ವಯಸ್ಸು ಹಾಗೂ ಎಸ್.ಎಸ್.ಎಲ್.ಸಿ ಪಡೆದ ಅಂಕದ ಶೇಕಡ (%) ಎರಡರ ಆಧಾರದ ಮೇಲೆ ಕ್ರಮವಾಗಿ 60 ಮತ್ತು 40 ಆದ್ಯತೆಯನ್ನು ನೀಡಿ ಈ ಕೆಳಕಂಡ ಮಾನದಂಡಗಳ ಮೂಲಕ ಆಯ್ಕೆ ಮಾಡುವುದು.

1. **ಅಭ್ಯರ್ಥಿಯ ವಯಸ್ಸಿನ ಜೇಷ್ಠತೆ ಮೇರೆಗೆ : -**

ಸೂತ್ರ = ಅಭ್ಯರ್ಥಿ ವಯಸ್ಸು x 100
ನಿಗದಿಪಡಿಸಿದ ವಯಸ್ಸು (40)

= ಬರುವ ಫಲಿತಾಂಶ x 60 / 100 = **ಅಭ್ಯರ್ಥಿಯ ವಯಸ್ಸಿನ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ**

[A]

19

2. ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಠತೆ ಮೇರೆಗೆ :-

ಸೂತ್ರ = ಎಸ್.ಎಸ್.ಎಲ್.ಸಿ ಯಲ್ಲಿ ಅಭ್ಯರ್ಥಿಯು ಪಡೆದ ಒಟ್ಟು ಅಂಕಗಳ ಶೇಕಡ x 100 / ನಿಗಧಿಪಡಿಸಿರುವ ಅಂಕದ ಮಿತಿ [45%]

= ಬರುವ ಫಲಿತಾಂಶ x 40 / 100 = ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ [B]

ಅಭ್ಯರ್ಥಿಯ ವಯಸ್ಸಿನ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ[A] + ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ [B]

= **ಅಭ್ಯರ್ಥಿ ಪಡೆಯುವ ಒಟ್ಟು ಶೇಕಡವಾರು ಫಲಿತಾಂಶ.**

ಅಭ್ಯರ್ಥಿಯು ಪಡೆಯುವ ಒಟ್ಟು ಶೇಕಡವಾರು ಫಲಿತಾಂಶದ ಏರಿಕೆಯಿಂದ ಇಳಿಕೆ ಕ್ರಮದಲ್ಲಿ [Descending Order] ಬರುವ ಶೇಕಡವಾರು ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು.

3. ಮಹಿಳೆಯರಿಗೆ ಶೇ 10% ರಷ್ಟು ಗುರಿಗಳನ್ನು ಮೀಸಲಿರಿಸುವುದು. ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸದೇ ಇದ್ದಲ್ಲಿ, ಪುರುಷ ಅಭ್ಯರ್ಥಿಗಳಿಗೆ ಸದರಿ ಗುರಿಗಳನ್ನು ಹಂಚಿಕೆ ಮಾಡತಕ್ಕದ್ದು.

<u>ಫಲಾನುಭವಿಗಳ ಆಯ್ಕೆಯಲ್ಲಿ ಆದ್ಯತೆ ನೀಡಬೇಕಾದ ಅಂಶಗಳು:</u>

- ನಿಯಮ ರೀತ್ಯ ಮಹಿಳೆಯರು ಅರ್ಜಿ ಸಲ್ಲಿಸಿದ್ದಲ್ಲಿ ಆದ್ಯತೆ ನೀಡಬಹುದಾಗಿದೆ.
- ಬಿ.ಪಿ.ಎಲ್. ರೇಖೆಗಿಂತ ಕೆಳಗಿರುವವರಿಗೆ ಆದ್ಯತೆ ನೀಡತಕ್ಕದ್ದು.
- ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರಿ ಹೊಂದಿಲ್ಲದೆ ಇರುವುದನ್ನು ಖಚಿತಪಡಿಸಿಕೊಳ್ಳಬೇಕು.
- ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದಾಗಿದೆ.

<u>ವಾಹನ ಸಾಲ ಮೇಳ:</u>

- ಪ್ರವಾಸಿ ಟ್ಯಾಕ್ಸಿ ಖರೀದಿಸಲು ಎಲ್ಲಾ ಜಿಲ್ಲೆಯಲ್ಲಿಯೂ ಫಲಾನುಭವಿಗಳಿಗೆ ಸೂಕ್ತವಾದ ಬ್ಯಾಂಕ್ ಸಾಲ ದೊರಕುವಂತೆ ಮಾಡಲು ಲೀಡ್ ಬ್ಯಾಂಕ್ ವ್ಯವಸ್ಥಾಪಕರೊಂದಿಗೆ ಹಾಗೂ ವಿವಿಧ ವಾಹನ ಏಜೆನ್ಸಿಯವರೊಂದಿಗೆ ವಾಹನ ಸಾಲ ಮೇಳ ಜರುಗಿಸಿ ಸ್ಥಳದಲ್ಲಿ ಸಾಲ ಮಂಜೂರಿಸಿದ ಬ್ಯಾಂಕ್‌ಗಳಿಗೆ ಮಂಜೂರಾತಿ ಅನುಪಾತಕ್ಕೆ ಅನುಗುಣವಾಗಿ ಸಹಾಯಧನ ವಿತರಿಸುವುದು.

ಅರ್ಜಿದಾರರು ಹೊಂದಿರಬೇಕಾದ ಅರ್ಹತೆಗಳು

ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ಖರೀದಿಸುವ ಯೋಜನೆಯ ಪ್ರಯೋಜನ ಪಡೆಯಲು ಅರ್ಜಿ ಸಲ್ಲಿಸಲು ಅರ್ಜಿದಾರರು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

ಅ) ಅರ್ಜಿದಾರರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.

ಆ) ಅರ್ಜಿದಾರರ ವಯಸ್ಸು 20 ರಿಂದ 40 ವರ್ಷದೊಳಗಿರಬೇಕು.

ಇ) ಅರ್ಜಿದಾರರು 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

ಈ) ಅಭ್ಯರ್ಥಿಗಳು ಲಘು ವಾಹನ ಚಾಲನಾ ಪರವಾನಗಿ ಪಡೆದು ಕನಿಷ್ಠ ಒಂದು ವರ್ಷವಾಗಿರಬೇಕು. ಅಭ್ಯರ್ಥಿಗಳು ವಾಹನ ಪರವಾನಗಿಯೊಂದಿಗೆ ಬ್ಯಾಡ್ಜ್ ಹೊಂದಿರತಕ್ಕದ್ದು.

ಉ) ನಗರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.2.00 ಲಕ್ಷ ಮೀರಬಾರದು.

ಊ) ಗ್ರಾಮಾಂತರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.1.50 ಲಕ್ಷ ಮೀರಬಾರದು

ಋ) ಅರ್ಜಿದಾರರು ಯಾವ ಜಿಲ್ಲೆಯ ನಿವಾಸಿಯಾಗಿರುತ್ತಾರೋ ಅದೇ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಬೇಕು.

ಎ) ಅರ್ಜಿದಾರನು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರಬಾರದು.

ಏ) ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದಾಗಿದೆ.

ಅರ್ಜಿದಾರರು ಸಲ್ಲಿಸಬೇಕಾದ ದಾಖಲೆಗಳು :

ಅ) ಜಿಲ್ಲಾಧಿಕಾರಿಗಳಿಂದ ಜಾಹೀರಾತು ಪ್ರಕಟಣೆಗೊಂಡ 30 ದಿನಗಳ ಒಳಗಾಗಿ ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಇತ್ತೀಚಿನ ಭಾವಚಿತ್ರದೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸಬೇಕು.

ಆ) ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡ್‌ನ ಪ್ರತಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ

ಇ) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿರುವ ಬಗ್ಗೆ ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರದ ಪ್ರತಿ.

ಈ) ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಆದಾಯದ ಪ್ರಮಾಣ ಪತ್ರದ ಪ್ರತಿ.

ಉ) ತಹಶೀಲ್ದಾರ್/ಮಹಾನಗರ ಪಾಲಿಕೆ/ನಗರ ಪಾಲಿಕೆ/ನಗರಸಭೆ/ಪುರಸಭೆ/ಗ್ರಾಮ ಪಂಚಾಯ್ತಿ /ಪಟ್ಟಣ ಪಂಚಾಯ್ತಿ-ಗಳಿಂದ ಪಡೆದಿರುವ ವಾಸಸ್ಥಳ ದೃಢೀಕರಣ ಪತ್ರದ ಪ್ರತಿ.

ಊ) ಖಾಯಂ ಲಘು ವಾಹನ ಚಾಲನಾ ಪರವಾನಗಿ ಪತ್ರ ಹಾಗೂ ಆರ್.ಟಿ.ಓ. ರವರಿಂದ ಪಡೆದಿರುವ ಡಿ.ಎಲ್. ಎಕ್ಸ್‌ಟ್ರಾಕ್ಟ್‌ಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು

ಋ) ವಿದ್ಯಾರ್ಹತೆಯ ಬಗ್ಗೆ ಕನಿಷ್ಠ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಯ ಪ್ರತಿ.

ಎ) ಅರ್ಜಿದಾರನು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರದ ಬಗ್ಗೆ. ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರಿ ಹೊಂದಿಲ್ಲದ ಬಗ್ಗೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯ್ತಿ /ಗ್ರಾಮ ಪಂಚಾಯ್ತಿ-ಇವುಗಳಿಂದ ಸ್ವಉದ್ಯೋಗ ಕಲ್ಪಿಸಿಕೊಳ್ಳುವ ಸೌಲಭ್ಯ ಪಡೆಯದೇ ಇರುವ ಬಗ್ಗೆ. ಕುಟುಂಬದ ಯಾವ ಸದಸ್ಯನು ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿಲ್ಲ ಎಂಬ ಬಗ್ಗೆ ಹಾಗೂ ಸ್ವಯಂ ಪ್ರಮಾಣೀಕರಿಸಿ. ರೂ.50/-ರ ಬೆಲೆಯ ಛಾಪಾ ಕಾಗದ (Affidavit)ದಲ್ಲಿ ನಮೂನೆ-3ರಲ್ಲಿ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

ಏ) ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ. ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದಾಗಿದೆ. ಈ ಸಂಬಂಧ ಅಭ್ಯರ್ಥಿಯಿಂದ ಪಡಿತರ ಚೀಟಿಯನ್ನು ಆಧಾರವಾಗಿ ಪಡೆಯತಕ್ಕದ್ದು.

ಐ) ಅರ್ಜಿಯಲ್ಲಿ ಅಭ್ಯರ್ಥಿಗಳ ದೂರವಾಣಿ ಸಂಖ್ಯೆಗಳನ್ನು ನಮೂದಿಸುವುದು ಕಡ್ಡಾಯ.

ಒ) ಆಯ್ಕೆಯಾದ ನಂತರ ಅಭ್ಯರ್ಥಿಗಳ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ಇಲ್ಲದೇ ಇರುವ ಬಗ್ಗೆ ಆಯಾ ವ್ಯಾಪ್ತಿಯ ಪೊಲೀಸ್ ಠಾಣೆಯಿಂದ ಪೊಲೀಸ್ ನಿರಾಕ್ಷೇಪಣಾ ಪತ್ರವನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಪಡೆಯುವುದು.

ಓ) ಅರ್ಜಿದಾರನು ಮೇಲಿನ ಎಲ್ಲಾ ದಾಖಲಾತಿಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

ಔ) ಆಯ್ಕೆಯಾದ ಅಭ್ಯರ್ಥಿಗಳಿಂದ ತಮಗೆ ವಿತರಿಸುವ ಪ್ರವಾಸಿ ವಾಹನವನ್ನು ಯಾರಿಗೂ ಪರಭಾರ ಮಾಡುವುದಿಲ್ಲವೆಂದು ನೋಟರಿಯಿಂದ ಪ್ರಮಾಣೀಕರಿಸಿ ರೂ.50/-ರ ಬೆಲೆಯ ಛಾಪಾ ಕಾಗದ (Affidavit)ದಲ್ಲಿ ಮುಚ್ಚಳಿಗೆ ಪಡೆಯತಕ್ಕದ್ದು.

ಷರತ್ತುಗಳು :

ಅ) ಫಲಾನುಭವಿಯೇ ಸ್ವತಃ ಟ್ಯಾಕ್ಸಿಯನ್ನು ಓಡಿಸಬೇಕು ಹೊರತು ಬೇರೆಯವರಿಗೆ ಪರಭಾರೆ ಮಾಡುವಂತಿಲ್ಲ. ಒಂದು ವೇಳೆ ಪರಭಾರ ಮಾಡಿರುವುದು ಕಂಡುಬಂದಲ್ಲಿ ಟ್ಯಾಕ್ಸಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ಬಗ್ಗೆ ಜಿಲ್ಲಾಧಿಕಾರಿಗಳು ಆರ್.ಟಿ.ಒ.ಗಳಿಗೆ ಪತ್ರ ಮುಖೇನ ತಿಳಿಸುವುದು. ಸದರಿ ವಾಹನವನ್ನು (05) ವರ್ಷಗಳವರೆಗೆ ಬೇರೆಯವರಿಗೆ ವರ್ಗಾವಣೆ ಮಾಡದಂತೆ ಕ್ರಮವಹಿಸುವುದು.

ಆ) ಪ್ರತಿ ವರ್ಷ ಫಲಾನುಭವಿಯು ಗಳಿಸಿದ ಆದಾಯದ ವಿವರಗಳನ್ನು ಜಿಲ್ಲಾ ಮಟ್ಟದ ಇಲಾಖೆಯ ಕಛೇರಿಗೆ ನೀಡುವುದು.

ಇ) ಫಲಾನುಭವಿಯು ತೆಗೆದುಕೊಳ್ಳುವ ಬ್ಯಾಂಕಿನ ಸಾಲದ ಮೊತ್ತವನ್ನು ನಿರಂತರವಾಗಿ ಮರುಪಾವತಿ ಮಾಡುವುದು

ಈ) ಫಲಾನುಭವಿಗಳಿಗೆ ವಿತರಿಸುವ ಪ್ರವಾಸಿ ಟ್ಯಾಕ್ಸಿಯನ್ನು ಸಾಲ ಮಂಜೂರಾತಿ ಮಾಡಿದ ಬ್ಯಾಂಕ್ ಹೆಸರಿಗೆ ಅಡಮಾನಿಕೆ (Hypothecation) ಮಾಡಿಕೊಳ್ಳತಕ್ಕದ್ದು. ಈ ಬಗ್ಗೆ ಸಂಬಂಧಪಟ್ಟ ಅಧೀನ ಕಛೇರಿಯ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ಅಗತ್ಯ ಕ್ರಮ ವಹಿಸತಕ್ಕದ್ದು.

ಉ) ಫಲಾನುಭವಿಗಳು ಪ್ರವಾಸಿಗರೊಡನೆ ಉತ್ತಮ ನಡವಳಿಕೆಯಿಂದ ವರ್ತಿಸುವುದು. ಕನ್ನಡ ಭಾಷಾ ಜ್ಞಾನ ಹಾಗೂ ಇತರ ಭಾಷೆಗಳ ಪರಿಣಿತಿ, ಪ್ರವಾಸಿ ಸ್ಥಳಗಳ ಪರಿಚಯ ಮುಂತಾದ ವಿಷಯಗಳ ಬಗ್ಗೆ ಸಾಮಾನ್ಯ ಜ್ಞಾನ ಹೊಂದಿದ್ದರ ಅನುಕೂಲವಾಗುವುದು.

ಬ್ರ್ಯಾಂಡಿಂಗ್ :

- ಫಲಾನುಭವಿಯು ಸ್ವ-ಇಚ್ಛೆಯಿಂದ ಯಾವುದೇ ಮಾದರಿಯ ವಾಹನವನ್ನು ಖರೀದಿಸಬಹುದು. ವಾಹನದ ಮೇಲೆ ಪ್ರವಾಸೋದ್ಯಮ ಇಲಾಖೆಯ ಲೋಗೋ, "ಪ್ರವಾಸೋದ್ಯಮ ಇಲಾಖೆ ನೆರವು" ಎಂದು ವಾಹನಗಳ ಮೇಲೆ ಬಿತ್ತರಿಸತಕ್ಕದ್ದು ಹಾಗೂ ಬ್ರಾಡಿಂಗ್ ಬಗ್ಗೆ ಸರ್ಕಾರ ಮುಂದೆ ಯಾವುದೇ ಆದೇಶ ಹೊರಡಿಸಿದ್ದಲ್ಲಿ ಅದನ್ನು ಪಾಲಿಸತಕ್ಕದ್ದು.

ಅಧೀನ ಕಛೇರಿಗಳ ಜವಾಬ್ದಾರಿಗಳು :

- ಪ್ರವಾಸಿ ಟ್ಯಾಕ್ಸಿ ವಿತರಣೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪ್ರಕ್ರಿಯೆ ಕೈಗೊಂಡ ಬಗ್ಗೆ ಪ್ರತಿ ಮಾಹೆ ನಿಗಧಿತ ನಮೂನೆ-1 ರಲ್ಲಿ ಜಿಲ್ಲಾಧಿಕಾರಿಗಳಿಗೆ ಹಾಗೂ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಗೆ ಕಡ್ಡಾಯವಾಗಿ ಮೂಲಕ ವರದಿ ಸಲ್ಲಿಸುವುದು.
- ಆಯ್ಕೆಯಾದ ಫಲಾನುಭವಿಗಳ ಪಟ್ಟಿ (Soft and Hard Copy)ಯನ್ನು ನಿಗಧಿತ ನಮೂನೆ-2 ರಲ್ಲಿ ಕೇಂದ್ರ ಕಛೇರಿ ತಪ್ಪದೇ ಸಲ್ಲಿಸುವುದು.

ವಿಶೇಷ ಸೂಚನೆ :

- ಈ ಕಾರ್ಯಕ್ರಮವನ್ನು ನಿಗಧಿತ ಸಮಯದಲ್ಲಿ ಅನುಷ್ಠಾನಗೊಳಿಸಿ ಈ ಕಾರ್ಯಕ್ರಮದ ಪ್ರಯೋಜನವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನಾಂಗದವರಿಗೆ ತಲುಪಿಸಲು ನಿರ್ಲಕ್ಷ್ಯ ತೋರಿಸಿದ ಅಧಿಕಾರಿಯು "ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013 ರ ಅಧ್ಯಾಯ-IV ಕಂಡಿಕೆ 24" ರ ಅನ್ವಯ ದಂಡನೆಗೆ ಒಳಗಾಗುತ್ತಾರೆ.

[ಬಿ.ಎಸ್. ಯತಿರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17ನೇ ಸಾಲಿನಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ವಿತರಿಸಲು ಮಂಜೂರಾತಿ.

ಓದಲಾಗಿದೆ: ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆರವರ ಪತ್ರ ಸಂಖ್ಯೆ:ಪ್ರಇ/ಯೋ-1/5/2016-17/2927, ದಿ:17-9-2016.

* * * *

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಪ್ರವಾಸೋದ್ಯಮ ನಿರ್ದೇಶಕರು ಬೆಂಗಳೂರುರವರು 2016-17ನೇ ಸಾಲಿನಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ 2000 ಅಭ್ಯರ್ಥಿಗಳಿಗೆ ಸ್ವ-ಉದ್ಯೋಗ ಕಲ್ಪಿಸಿಕೊಳ್ಳಲು ತಲಾ 2.00 ಲಕ್ಷಗಳ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ಪ್ರಸಕ್ತ ಸಾಲಿನ ಲೆಕ್ಕಶೀರ್ಷಿಕೆ 3452-80-104-0-04-059 ಇತರೆ ವೆಚ್ಚಗಳು [ಯೋಜನೆ] ಅಡಿಯಲ್ಲಿ ತಯಾರಿಸಿರುವ ಕ್ರಿಯಾಯೋಜನೆಯಲ್ಲಿ ರೂ.4000.00 ಲಕ್ಷಗಳನ್ನು ಕಾಯ್ದಿರಿಸಿಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ.

ಮುಂದುವರೆದು, ರಾಜ್ಯದ 30 ಜಿಲ್ಲೆಗಳಲ್ಲಿರುವ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದ ಜನಸಂಖ್ಯೆ, ಪ್ರವಾಸಿ ತಾಣಗಳ ಸಂಖ್ಯೆ ಹಾಗೂ ಹಿಂದುಳಿದ ತಾಲ್ಲೂಕುಗಳ ಸಂಖ್ಯೆಗಳ ಸರಾಸರಿ ಶೇಕಡವಾರು ಆಧಾರದ ಮೇಲೆ ಪ್ರವಾಸಿ ಟ್ಯಾಕ್ಸಿಗಳ ಭೌತಿಕ ಗುರಿ ಹಾಗೂ ಅನುದಾನವನ್ನು ಜಿಲ್ಲಾವಾರು ಹಂಚಿಕೆ ಮಾಡಿ ನಿಗಧಿಪಡಿಸಿದ್ದು, ಪ್ರವಾಸಿ ಟ್ಯಾಕ್ಸಿಗಳನ್ನು ಖರೀದಿಸಲು ಇಲಾಖೆಯಿಂದ ಸಹಾಯಧನ ವಿತರಣೆ ವಿಧಾನಗಳ ಬಗ್ಗೆ ಮಾರ್ಗಸೂಚಿಗಳಿಗೆ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಅಭ್ಯರ್ಥಿಗಳ ಕುಟುಂಬವು ಹೊಂದಿರಬೇಕಾಗಿರುವ ಆದಾಯದ ಮಿತಿಯನ್ನು ಮಾತ್ರ ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ಜಾತಿಗೆ ಸೇರಿದ ಅಭ್ಯರ್ಥಿಗಳಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸುವ ಯೋಜನೆ ಜಾರಿಗೊಳಿಸುವುದಕ್ಕೆ ಸಂಬಂಧಪಟ್ಟಂತೆಆದೇಶ ಸಂಖ್ಯೆ:ಬಿಸಿಡಿಬ್ಲ್ಯೂ/525/ಬಿಎಂಎಸ್/2012, ದಿ:25-5-2016ರಲ್ಲಿ ತಿಳಿಸಿರುವನ್ವಯ ಅಭ್ಯರ್ಥಿಗಳ ಆದಾಯದ ಮಿತಿಯನ್ನು ಅನುಸರಿಸಲು ಮಾರ್ಗಸೂಚಿಗಳಲ್ಲಿ ಸೇರಿಸಲಾಗಿದೆ ಎಂದು ವರದಿ ಮಾಡಿರುತ್ತಾರೆ.

ಈ ಯೋಜನೆಯಲ್ಲಿ ಒಂದು ವಾಹನಕ್ಕೆ ತಗಲುವ ಒಟ್ಟು ಮೊತ್ತದಲ್ಲಿ ರೂ.2.00ಲಕ್ಷಗಳನ್ನು ಸಹಾಯಧನವಾಗಿ ನೀಡಲಾಗುವುದು. ವಾಹನಕ್ಕೆ ತಗಲುವ ಮೊತ್ತದಲ್ಲಿ ಶೇ.5%ರಷ್ಟು ಮೊತ್ತವನ್ನು ಫಲಾನುಭವಿ ಭರಿಸುವರು ಹಾಗೂ ಉಳಿದ ಮೊತ್ತವನ್ನು ರಾಷ್ಟ್ರೀಕೃತ/ವಾಣಿಜ್ಯ ಬ್ಯಾಂಕ್‌ಗಳ ಮೂಲಕ ಸಾಲದ ರೂಪದಲ್ಲಿ ಒದಗಿಸಲಾಗುವುದೆಂದು ತಿಳಿಸಿರುತ್ತಾರೆ. ನಿಗಧಿಪಡಿಸಿರುವ ಗುರಿಯಂತೆ 2000

..2/-

ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸಲು ರೂ.4000.00 ಲಕ್ಷಗಳನ್ನು ರಾಜ್ಯದ 30 ಜಿಲ್ಲೆಗಳಲ್ಲಿರುವ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಸಮಿತಿರವರುಗಳಿಗೆ ಬಿಡುಗಡೆ ಮಾಡಲು ಹಾಗೂ ಲಗತ್ತಿಸಿರುವ ಮಾರ್ಗಸೂಚಿಗಳಿಗೆ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ:ಪ್ರಇ 297 ಪ್ರವಾಯೋ 2016, ದಿನಾಂಕ: 02.11.2016</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2016-17ನೇ ಸಾಲಿನಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ ರೂ.2.00ಲಕ್ಷಗಳ ಸಹಾಯಧನದೊಂದಿಗೆ 2000 ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸಲು ರೂ.40.00ಕೋಟಿ (ರೂಪಾಯಿ ನಲವತ್ತು ಕೋಟಿ ಮಾತ್ರ)ಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1ರಲ್ಲಿನ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಯೋಜನೆಯನ್ನು ಜಾರಿಗೆ ತರಲು ಅನುಬಂಧ-2ರಲ್ಲಿ ನಮೂದಿಸಿರುವ ರಾಜ್ಯದ 30 ಜಿಲ್ಲೆಗಳ ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಸಮಿತಿರವರಿಗೆ ಬಿಡುಗಡೆ ಮಾಡಲು ಸರ್ಕಾರದ ಅನುಮತಿ ನೀಡಲಾಗಿದೆ.

ಎಲ್ಲಾ ಜಿಲ್ಲಾಧಿಕಾರಿಗಳು ಟ್ಯಾಕ್ಸಿ ವಿತರಿಸಲು ಅರ್ಜಿಗಳನ್ನು ಆಹ್ವಾನಿಸಿ ಫಲಾನುಭವಿಗಳನ್ನು ಗುರುತಿಸಲು ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು ಹಾಗು ಸರ್ಕಾರದ ಮುಂದಿನ ನಿರ್ದೇಶನ ಬರುವವರೆಗೆ ವಾಹನವನ್ನು ಖರೀದಿಸತಕ್ಕದ್ದಲ್ಲ.

ಸದರಿ ವೆಚ್ಚವನ್ನು 2016-17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ:3452-80-104-0-04-059 ಇತರೆ ವೆಚ್ಚಗಳು[ಯೋಜನೆ] ರಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆದೇಶ ಸಂಖ್ಯೆ ಎಫ್.ಡಿ. 03 ಟಿ.ಎಫ್.ಪಿ.2016 ದಿ:2-4-2016ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
2/11/16
(ಬಿ.ಎನ್.ಯತಿರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಇವರಿಗೆ,

1. ಮಹಾಲೇಖಪಾಲರು(ಲೆಕ್ಕಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಖನಿಜ ಭವನ, ಬೆಂಗಳೂರು.
3. ಎಲ್ಲಾ ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ.
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಕೆ.ಆರ್ ವೃತ್ತ, ಬೆಂಗಳೂರು-1
5. ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ ಪ್ರಇ 297 ಪ್ರವಾಯೋ 2016, ದಿನಾಂಕ:02.11.2016ಕ್ಕೆ ಅನುಬಂಧ-1.

2016-17 ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ವಿತರಿಸುವ ಸಂಬಂಧ ಮಾರ್ಗಸೂಚಿಗಳು.

ಯೋಜನೆ:

- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಲಘು ವಾಹನ ಚಾಲನಾ ಪರವಾನಗಿ ಹೊಂದಿರುವ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಅರ್ಹ ನಿರುದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳುವ ದೃಷ್ಟಿಯಿಂದ ಪ್ರವಾಸಿ ತಾಣಗಳಿಗೆ ಪ್ರವಾಸಿಗರನ್ನು ಕರೆದುಕೊಂಡು ಹೋಗಲು ಸಹಾಯಧನದ ಮೂಲಕ ಪ್ರವಾಸಿ ಟ್ಯಾಕ್ಸಿಗಳನ್ನು ಒದಗಿಸುವುದು.

ಯೋಜನೆಯ ಘಟಕ ವೆಚ್ಚ:

ಫಲಾನುಭವಿಯು ಸ್ವ-ಇಚ್ಛೆಯಿಂದ ಯಾವುದೇ ಮಾದರಿಯ ವಾಹನವನ್ನು ಖರೀದಿಸಬಹುದು. ಈ ವಾಹನದ ಘಟಕ ವೆಚ್ಚದ ವಿವರವು ಕೆಳಕಂಡಂತಿದೆ.

- ಇಲಾಖೆಯ ಸಹಾಯಧನ – ರೂ.2.00 ಲಕ್ಷಗಳು ಮಾತ್ರ.
- ಫಲಾನುಭವಿಯ ವಂತಿಗೆ - ವಾಹನದ ಒಟ್ಟು ವೆಚ್ಚದ ಶೇ.5 ರಷ್ಟು.
- ಬ್ಯಾಂಕ್ ಸಾಲ – ವಾಹನದ ಒಟ್ಟು ವೆಚ್ಚದಲ್ಲಿ ಉಳಿದ ಮೊತ್ತ.

ಜಿಲ್ಲಾವಾರು ಗುರಿ :

ಇಲಾಖೆಯಿಂದ ಪ್ರತಿ ಜಿಲ್ಲೆಗೆ ನಿಗಧಿಪಡಿಸಿದ ಅಭ್ಯರ್ಥಿಗಳ ಗುರಿಯನ್ನು ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯ ತಾಲ್ಲೂಕುವಾರು ಜನಸಂಖ್ಯೆಗೆ ಅನುಗುಣವಾಗಿ ನಿಗಧಿಪಡಿಸುವುದು. ಈ ಗುರಿಯನ್ನು ಜಿಲ್ಲೆಯಲ್ಲಿರುವ ಲೀಡ್ ಬ್ಯಾಂಕ್(ಡಿ.ಎಲ್.ಬಿ.ಸಿ)ಗೆ ರವಾನಿಸಿ ಬ್ಯಾಂಕ್ ಸಾಲ ಮಂಜೂರು ಮಾಡಿಸಲು ಕ್ರಮ ವಹಿಸುವುದು.

ಪ್ರವಾಸಿ ಟ್ಯಾಕ್ಸಿ ವಿತರಣೆ ಪ್ರಕ್ರಿಯೆ ಕಾಲಾವಧಿ:

ಕ್ರ. ಸಂ.	ಪ್ರಕ್ರಿಯೆ	ದಿನಾಂಕ
1	ಅರ್ಜಿ ಆಹ್ವಾನಿಸಲು ಪತ್ರಿಕಾ ಪ್ರಕಟಣೆ ಹೊರಡಿಸುವುದು	ಪ್ರವಾಸೋದ್ಯಮ ನಿರ್ದೇಶಕರು ನಿರ್ಧರಿಸುವುದು.
2	ಅರ್ಜಿ ವಿತರಣೆ	
3	ಅರ್ಜಿ ಸ್ವೀಕರಿಸುವುದು	
4	ಸ್ವೀಕರಿಸಿದ ಅರ್ಜಿಗಳ ಪರಿಶೀಲನೆ	
5	ಪರಿಶೀಲಿಸಿದ ಅರ್ಜಿಗಳ ಪಟ್ಟಿಯನ್ನು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆ ಕರೆದು ಸಮಿತಿಯ ಮುಂದೆ ಮಂಡಿಸಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು	
6	ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ಹಾಗೂ ಆಕ್ಷೇಪಣೆ ಆಹ್ವಾನ	
7	ಸ್ವೀಕರಿಸಿದ ಆಕ್ಷೇಪಣೆಗಳ ಇತ್ಯರ್ಥಪಡಿಸುವುದು.	

ಕ್ರ. ಸಂ.	ಪ್ರಕ್ರಿಯೆ	ದಿನಾಂಕ
8	ಅಂತಿಮ ಫಲಾನುಭವಿಗಳ ಆಯ್ಕೆ ಪಟ್ಟಿ ಪ್ರಕಟಣೆ	
9	ಫಲಾನುಭವಿಗಳ ಪಟ್ಟಿಯನ್ನು ಬ್ಯಾಂಕ್ ಸಾಲ ಒದಗಿಸಲು ಬ್ಯಾಂಕ್‌ಗೆ ಸಲ್ಲಿಸುವುದು	
10	ಬ್ಯಾಂಕ್ ಸಾಲ ಮಂಜೂರಾದ ನಂತರ ಇಲಾಖೆಯ ಸಹಾಯಧನವನ್ನು ಬ್ಯಾಂಕ್‌ಗೆ ಜಮಾ ಮಾಡುವುದು	ಪ್ರವಾಸೋದ್ಯಮ ನಿರ್ದೇಶಕರು ನಿರ್ಧರಿಸುವುದು.
11	ಪ್ರವಾಸಿ ಟ್ಯಾಕ್ಸಿ ವಿತರಣೆ	
12	ಪ್ರವಾಸಿ ಟ್ಯಾಕ್ಸಿ ವಿತರಣೆ ಮಾಡಿರುವ ಬಗ್ಗೆ ಇಲಾಖೆಗೆ ವರದಿ ಸಲ್ಲಿಸಲು ಕೊನೆಯ ದಿನ	

ಆಯ್ಕೆ ಸಮಿತಿ :

ಫಲಾನುಭವಿಗಳ ಅರ್ಹತಾ ಪಟ್ಟಿ ಆಯ್ಕೆ ಮಾಡುವ ಸಮಿತಿ:

ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವುದು:

1. ಉಪ ವಿಭಾಗಾಧಿಕಾರಿಗಳು- ಅಧ್ಯಕ್ಷರು.
2. ತಹಶೀಲ್ದಾರ್ (ಆಯಾ ಜಿಲ್ಲಾ ಕೇಂದ್ರ ಸ್ಥಾನದಲ್ಲಿರುವವರು).
3. ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು-ಸದಸ್ಯ ಕಾರ್ಯದರ್ಶಿಗಳು.
4. ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ಅಧಿಕಾರಿ, -ಸದಸ್ಯರು.
5. ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿ (ಡಿ.ಒ.ಬಿ.ಸಿ) - ಸದಸ್ಯರು
6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ (ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ)-ಸದಸ್ಯರು
7. ಪ್ರಾದೇಶಿಕ ಸಾರಿಗೆ ಅಧಿಕಾರಿ - ಸದಸ್ಯರು.
8. ವ್ಯವಸ್ಥಾಪಕರು, ಲೀಡ್ ಬ್ಯಾಂಕ್ - ಸದಸ್ಯರು.

ಆಯ್ಕೆ ವಿಧಾನ :

- **ಫಲಾನುಭವಿಗಳ ಆಯ್ಕೆಯಲ್ಲಿ ಅಭ್ಯರ್ಥಿಯ ವಯಸ್ಸು ಹಾಗೂ ಎಸ್.ಎಸ್.ಎಲ್.ಸಿ ಪಡೆದ ಅಂಕದ ಶೇಕಡ (%) ಎರಡರ ಆಧಾರದ ಮೇಲೆ ಕ್ರಮವಾಗಿ 60 ಮತ್ತು 40 ಆದ್ಯತೆಯನ್ನು ನೀಡಿ ಈ ಕೆಳಕಂಡ ಮಾನದಂಡಗಳ ಮೂಲಕ ಆಯ್ಕೆ ಮಾಡುವುದು.**

1. **ಅಭ್ಯರ್ಥಿಯ ವಯಸ್ಸಿನ ಜೇಷ್ಟತೆ ಮೇರೆಗೆ: -**

$$\text{ಸೂತ್ರ} = \frac{\text{ಅಭ್ಯರ್ಥಿ ವಯಸ್ಸು} \times 100}{\text{ನಿಗಧಿಪಡಿಸಿದ ವಯಸ್ಸು (40)}}$$

$$= \frac{\text{ಬರುವ ಫಲಿತಾಂಶ} \times 60}{100} = \text{ಅಭ್ಯರ್ಥಿಯ ವಯಸ್ಸಿನ ಜೇಷ್ಟತೆ ಮೇರೆಗೆ ಪಡೆದ ಫಲಿತಾಂಶ (A)}$$

2. ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಟತೆ ಮೇರೆಗೆ:-

ಸೂತ್ರ = $\frac{\text{ಎಸ್.ಎಸ್.ಎಲ್.ಸಿ ಯಲ್ಲಿ ಅಭ್ಯರ್ಥಿಯು ಪಡೆದ ಒಟ್ಟು ಅಂಕಗಳ ಶೇಕಡ} \times 100}{\text{ನಿಗಧಿಪಡಿಸಿರುವ ಅಂಕದ ಮಿತಿ(45\%)}}$

= $\frac{\text{ಬರುವ ಫಲಿತಾಂಶ} \times 40}{100}$ = ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಟತೆ ಮೇರೆಗೆ ಪಡೆದ ಫಲಿತಾಂಶ (B)

ಅಭ್ಯರ್ಥಿಯ ವಯಸ್ಸಿನ ಜೇಷ್ಟತೆ ಮೇರೆಗೆ ಪಡೆದ ಫಲಿತಾಂಶ (A) + ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಟತೆ ಮೇರೆಗೆ ಪಡೆದ ಫಲಿತಾಂಶ (B) = ಅಭ್ಯರ್ಥಿ ಪಡೆಯುವ ಒಟ್ಟು ಶೇಕಡವಾರು ಫಲಿತಾಂಶ.

ಅಭ್ಯರ್ಥಿಯು ಪಡೆಯುವ ಒಟ್ಟು ಶೇಕಡವಾರು ಫಲಿತಾಂಶದ ಏರಿಕೆಯಿಂದ ಇಳಿಕೆ ಕ್ರಮದಲ್ಲಿ **(Descending Order)** ಬರುವ ಶೇಕಡವಾರು ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು.

3. ಮಹಿಳೆಯರಿಗೆ ಶೇ. 10% ರಷ್ಟು ಗುರಿಗಳನ್ನು ಮೀಸಲಿರಿಸುವುದು. ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸದೇ ಇದ್ದಲ್ಲಿ, ಪುರುಷ ಅಭ್ಯರ್ಥಿಗಳಿಗೆ ಸದರಿ ಗುರಿಗಳನ್ನು ಹಂಚಿಕೆ ಮಾಡತಕ್ಕದ್ದು.

ಫಲಾನುಭವಿಗಳ ಆಯ್ಕೆಯಲ್ಲಿ ಆದ್ಯತೆ ನೀಡಬೇಕಾದ ಅಂಶಗಳು:

- ನಿಯಮ ರೀತ್ಯ ಮಹಿಳೆಯರು ಅರ್ಜಿ ಸಲ್ಲಿಸಿದ್ದಲ್ಲಿ ಆಧ್ಯತೆ ನೀಡಬಹುದಾಗಿದೆ.
- ಬಿ.ಪಿ.ಎಲ್. ರೇಖೆಗಿಂತ ಕೆಳಗಿರುವವರಿಗೆ ಆಧ್ಯತೆ ನೀಡತಕ್ಕದ್ದು.
- ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರಿ ಹೊಂದಿಲ್ಲದೆ ಇರುವುದನ್ನು ಖಚಿತಪಡಿಸಿಕೊಳ್ಳಬೇಕು.
- ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದಾಗಿದೆ.

ವಾಹನ ಸಾಲ ಮೇಳ:

- ಪ್ರವಾಸಿ ಟ್ಯಾಕ್ಸಿ ಖರೀದಿಸಲು ಎಲ್ಲಾ ಜಿಲ್ಲೆಯಲ್ಲಿಯೂ ಫಲಾನುಭವಿಗಳಿಗೆ ಸೂಕ್ತವಾದ ಬ್ಯಾಂಕ್ ಸಾಲ ದೊರಕುವಂತೆ ಮಾಡಲು ಲೀಡ್ ಬ್ಯಾಂಕ್ ವ್ಯವಸ್ಥಾಪಕರೊಂದಿಗೆ ಹಾಗೂ ವಿವಿಧ ವಾಹನ ಏಜೆನ್ಸಿಯವರೊಂದಿಗೆ ವಾಹನ ಸಾಲ ಮೇಳ ಜರುಗಿಸಿ ಸ್ಥಳದಲ್ಲಿ ಸಾಲ ಮಂಜೂರಿಸಿದ ಬ್ಯಾಂಕ್‌ಗಳಿಗೆ ಮಂಜೂರಾತಿ ಅನುಪಾತಕ್ಕೆ ಅನುಗುಣವಾಗಿ ಸಹಾಯಧನ ವಿತರಿಸುವುದು.

ಅರ್ಜಿದಾರರು ಹೊಂದಿರಬೇಕಾದ ಅರ್ಹತೆಗಳು :

ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ಖರೀದಿಸುವ ಯೋಜನೆಯ ಪ್ರಯೋಜನ ಪಡೆಯಲು ಅರ್ಜಿ ಸಲ್ಲಿಸಲು ಅರ್ಜಿದಾರರ ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

ಅ) ಅರ್ಜಿದಾರರು ಹಿಂದುಳಿದ ಅಥವಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಸೇರಿದವರಾಗಿರಬೇಕು.

ಆ) ಅರ್ಜಿದಾರರನ ವಯಸ್ಸು 20 ರಿಂದ 40 ವರ್ಷದೊಳಗಿರಬೇಕು.

ಇ) ಅರ್ಜಿದಾರರು 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

ಈ) ಅಭ್ಯರ್ಥಿಗಳು ಲಘು ವಾಹನ ಚಾಲನಾ ಪರವಾನಗಿ ಪಡೆದು ಕನಿಷ್ಠ ಒಂದು ವರ್ಷವಾಗಿರಬೇಕು. ಅಭ್ಯರ್ಥಿಗಳು ವಾಹನ ಪರವಾನಗಿಯೊಂದಿಗೆ ಬ್ಯಾಡ್ಜ್‌ನ್ನು ಹೊಂದಿರತಕ್ಕದ್ದು.

ಉ) ನಗರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.55,000/- ಗಳು ಮೀರಬಾರದು.

ಊ) ಗ್ರಾಮಾಂತರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.40,000/-ಗಳು ಮೀರಬಾರದು.

ಋ) ಅರ್ಜಿದಾರರು ಯಾವ ಜಿಲ್ಲೆಯ ನಿವಾಸಿಯಾಗಿರುತ್ತಾರೋ ಅದೇ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಬೇಕು.

ಎ) ಅರ್ಜಿದಾರನು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರಬಾರದು.

ಏ) ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದಾಗಿದೆ.

ಅರ್ಜಿದಾರರು ಸಲ್ಲಿಸಬೇಕಾದ ದಾಖಲೆಗಳು :

ಅ) ಜಿಲ್ಲಾಧಿಕಾರಿಗಳಿಂದ ಜಾಹೀರಾತು ಪ್ರಕಟಣೆಗೊಂಡ 30 ದಿನಗಳ ಒಳಗಾಗಿ ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಇತ್ತೀಚಿನ ಭಾವಚಿತ್ರದೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸಬೇಕು.

ಆ) ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡ್‌ನ ಪ್ರತಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಇ) ಹಿಂದುಳಿದ ಅಥವಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರುವ ಬಗ್ಗೆ ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರದ ಪ್ರತಿ.

ಈ) ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಆದಾಯದ ಪ್ರಮಾಣ ಪತ್ರದ ಪ್ರತಿ.

ಉ) ತಹಶೀಲ್ದಾರ್/ಮಹಾನಗರ ಪಾಲಿಕೆ/ನಗರ ಪಾಲಿಕೆ/ನಗರಸಭೆ/ಪುರಸಭೆ/ಗ್ರಾಮ ಪಂಚಾಯ್ತಿ /ಪಟ್ಟಣ ಪಂಚಾಯ್ತಿ-ಗಳಿಂದ ಪಡೆದಿರುವ ವಾಸಸ್ಥಳ ದೃಢೀಕರಣ ಪತ್ರದ ಪ್ರತಿ.

ಊ) ಖಾಯಂ ಲಘು ವಾಹನ ಚಾಲನಾ ಪರವಾನಗಿ ಪತ್ರ ಹಾಗೂ ಆರ್.ಟಿ.ಓ. ರವರಿಂದ ಪಡೆದಿರುವ ಡಿ.ಎಲ್. ಎಕ್ಸ್‌ಟ್ರಾಕ್ಟ್‌ಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

ಋ) ವಿದ್ಯಾರ್ಹತೆಯ ಬಗ್ಗೆ ಕನಿಷ್ಠ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಯ ಪ್ರತಿ.

ಎ) ಅರ್ಜಿದಾರನು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರದ ಬಗ್ಗೆ, ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರಿ ಹೊಂದಿಲ್ಲದೆ ಬಗ್ಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯ್ತಿ /ಗ್ರಾಮ ಪಂಚಾಯ್ತಿ-ಇವುಗಳಿಂದ ಸ್ವಉದ್ಯೋಗ ಕಲ್ಪಿಸಿಕೊಳ್ಳುವ ಸೌಲಭ್ಯ ಪಡೆಯದೇ ಇರುವ ಬಗ್ಗೆ, ಕುಟುಂಬದ ಯಾವ ಸದಸ್ಯನು ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿಲ್ಲ ಎಂಬ ಬಗ್ಗೆ ಹಾಗೂ ಸ್ವಯಂ ಪ್ರಮಾಣಿಕರಿಸಿ, ರೂ.50/-ರ ಬೆಲೆಯ ಛಾಪಾ ಕಾಗದ (Affidavit)ದಲ್ಲಿ ನಮೂನೆ -3 ರಲ್ಲಿ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

ಏ) ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದಾಗಿದೆ. ಈ ಸಂಬಂಧ ಅಭ್ಯರ್ಥಿಯಿಂದ ಪಡಿತರ ಚೀಟಿಯನ್ನು ಆಧಾರವಾಗಿ ಪಡೆಯತಕ್ಕದ್ದು.

ಐ) ಅರ್ಜಿಯಲ್ಲಿ ಅಭ್ಯರ್ಥಿಗಳ ದೂರವಾಣಿ ಸಂಖ್ಯೆಗಳನ್ನು ನಮೂದಿಸುವುದು ಖಡ್ಡಾಯ.

ಒ) ಆಯ್ಕೆಯಾದ ನಂತರ ಅಭ್ಯರ್ಥಿಗಳ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ಇಲ್ಲದೇ ಇರುವ ಬಗ್ಗೆ ಆಯಾ ವ್ಯಾಪ್ತಿಯ ಪೋಲೀಸ್ ಠಾಣೆಯಿಂದ ಪೋಲೀಸ್ ನಿರಾಕ್ಷೇಪಣಾ ಪತ್ರವನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಪಡೆಯುವುದು.

ಓ) ಅರ್ಜಿದಾರನು ಮೇಲಿನ ಎಲ್ಲಾ ದಾಖಲಾತಿಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

ಔ) ಆಯ್ಕೆಯಾದ ಅಭ್ಯರ್ಥಿಗಳಿಂದ ತಮಗೆ ವಿತರಿಸುವ ಪ್ರವಾಸಿ ವಾಹನವನ್ನು ಯಾರಿಗೂ ಪರಬಾರೆ ಮಾಡುವುದಿಲ್ಲವೆಂದು ನೋಟರಿಯಿಂದ ಪ್ರಮಾಣಿಕರಿಸಿ ರೂ.50/-ರ ಬೆಲೆಯ ಛಾಪಾ ಕಾಗದ (Affidavit)ದಲ್ಲಿ ಮುಚ್ಚಳಿಗೆ ಪಡೆಯತಕ್ಕದ್ದು.

.....5

ಷರತ್ತುಗಳು :

ಅ) ಫಲಾನುಭವಿಯೇ ಸ್ವತಃ ಟ್ಯಾಕ್ಸಿಯನ್ನು ಓಡಿಸಬೇಕು ಹೊರತು ಬೇರೆಯವರಿಗೆ ಪರಬಾರೆ ಮಾಡುವಂತಿಲ್ಲ. ಒಂದು ವೇಳೆ ಪರಭಾರೆ ಮಾಡಿರುವುದು ಕಂಡುಬಂದಲ್ಲಿ ಟ್ಯಾಕ್ಸಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ಬಗ್ಗೆ ಜಿಲ್ಲಾಧಿಕಾರಿಗಳು ಆರ್.ಟಿ.ಓ.ಗಳಿಗೆ ಪತ್ರ ಮುಖೇನ ತಿಳಿಸುವುದು. ಸದರಿ ವಾಹನವನ್ನು (05) ವರ್ಷಗಳವರೆಗೆ ಬೇರೆಯವರಿಗೆ ವರ್ಗಾವಣೆ ಮಾಡದಂತೆ ಕ್ರಮವಹಿಸುವುದು.

ಆ) ಪ್ರತಿ ವರ್ಷ ಫಲಾನುಭವಿಯು ಗಳಿಸಿದ ಆದಾಯದ ವಿವರಗಳನ್ನು ಜಿಲ್ಲಾ ಮಟ್ಟದ ಇಲಾಖೆಯ ಕಛೇರಿಗೆ ನೀಡುವುದು.

ಇ) ಫಲಾನುಭವಿಯು ತೆಗೆದುಕೊಳ್ಳುವ ಬ್ಯಾಂಕಿನ ಸಾಲದ ಮೊತ್ತವನ್ನು ನಿರಂತರವಾಗಿ ಮರುಪಾವತಿ ಮಾಡುವುದು.

ಈ) ಫಲಾನುಭವಿಗಳಿಗೆ ವಿತರಿಸುವ ಪ್ರವಾಸಿ ಟ್ಯಾಕ್ಸಿಯನ್ನು ಸಾಲ ಮಂಜೂರಾತಿ ಮಾಡಿದ ಬ್ಯಾಂಕ್ ಹೆಸರಿಗೆ ಅಡಮಾನಿಕೆ (Hypothecation) ಮಾಡಿಕೊಳ್ಳತಕ್ಕದ್ದು. ಈ ಬಗ್ಗೆ ಸಂಬಂಧಪಟ್ಟ ಅಧೀನ ಕಛೇರಿಯ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ಅಗತ್ಯ ಕ್ರಮ ವಹಿಸತಕ್ಕದ್ದು.

ಉ) ಫಲಾನುಭವಿಗಳು ಪ್ರವಾಸಿಗರೊಡನೆ ಉತ್ತಮ ನಡವಳಿಕೆಯಿಂದ ವರ್ತಿಸುವುದು. ಕನ್ನಡ ಭಾಷಾ ಜ್ಞಾನ ಹಾಗೂ ಇತರೆ ಭಾಷೆಗಳ ಪರಿಣಿತಿ, ಪ್ರವಾಸಿ ಸ್ಥಳಗಳ ಪರಿಚಯ ಮುಂತಾದ ವಿಷಯಗಳ ಬಗ್ಗೆ ಸಾಮಾನ್ಯ ಜ್ಞಾನ ಹೊಂದಿದ್ದರೆ ಅನುಕೂಲವಾಗುವುದು.

ಬ್ರಾಂಡಿಂಗ್ :

- ಫಲಾನುಭವಿಯು ಸ್ವ-ಇಚ್ಛೆಯಿಂದ ಯಾವುದೇ ಮಾದರಿಯ ವಾಹನವನ್ನು ಖರೀದಿಸಬಹುದು. ವಾಹನದ ಮೇಲೆ ಪ್ರವಾಸೋದ್ಯಮ ಇಲಾಖೆಯ ಲೋಗೋ, "ಪ್ರವಾಸೋದ್ಯಮ ಇಲಾಖೆ ನೆರವು" ಎಂದು ವಾಹನಗಳ ಮೇಲೆ ಬಿತ್ತರಿಸತಕ್ಕದ್ದು ಹಾಗೂ ಬ್ರಾಡಿಂಗ್ ಬಗ್ಗೆ ಸರ್ಕಾರ ಮುಂದೆ ಯಾವುದೇ ಆದೇಶ ಹೊರಡಿಸಿದ್ದಲ್ಲಿ ಅದನ್ನು ಪಾಲಿಸತಕ್ಕದ್ದು.

ಅಧೀನ ಕಛೇರಿಗಳ ಜವಾಬ್ದಾರಿಗಳು :

- ಪ್ರವಾಸಿ ಟ್ಯಾಕ್ಸಿ ವಿತರಣೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪ್ರಕ್ರಿಯೆ ಕೈಗೊಂಡ ಬಗ್ಗೆ ಪ್ರತಿ ಮಾಹೆ ನಿಗಧಿತ ನಮೂನೆ-1 ರಲ್ಲಿ ಜಿಲ್ಲಾಧಿಕಾರಿಗಳಿಗೆ ಹಾಗೂ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಗೆ ಕಡ್ಡಾಯವಾಗಿ ಮೂಲಕ ವರದಿ ಸಲ್ಲಿಸುವುದು.
- ಆಯ್ಕೆಯಾದ ಫಲಾನುಭವಿಗಳ ಪಟ್ಟಿ (Soft and Hard Copy) ಯನ್ನು ನಿಗಧಿತ ನಮೂನೆ-2 ರಲ್ಲಿ ಕೇಂದ್ರ ಕಛೇರಿ ತಪ್ಪದೇ ಸಲ್ಲಿಸುವುದು.

(ಬಿ.ಎನ್. ಯತಿರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ.

ಅನುಬಂಧ-2

ಕ್ರ ಸಂ	ಮೀಸಲಾತಿ	ಹೆಸರು	ವಿಳಾಸ	ಪ್ರವಾಸಿ ಟ್ಯಾಕ್ಸಿ ವಿತರಣೆಗೊಂಡ ವರ್ಷ	ಬ್ಯಾಂಕ್ ವಿವರ	ಪ್ರವಾಸಿ ಟ್ಯಾಕ್ಸಿ ಬಳಕೆ ವಿವರ
1	ಪ.ಜಾ	ಶಿವಕುಮಾರ್ ಎಸ್	S/oಪೌತಿ ರಾಜು ಹೆಚ್. ಬಿ, ಮಂಗಳಾದೇವಿ ನಗರ, ಮಡಿಕೇರಿ 8892949584 9481253192	2017–18	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಟೌನ್ ಶಾಖೆ, ಜಿ.ಟಿ ರಸ್ತೆ ಮಡಿಕೇರಿ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
2	ಪ.ಜಾ	ವೆಂಕಟಮೂರ್ತಿ.ಹೆಚ್. ವಿ	S/oಹೆಚ್.ಡಿ ವೆಂಕಟಪ್ಪ, ಶಿವಕೇರಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ 9900402964	2017–18	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವಿರಾಜಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
3	ಪ.ಜಾ	ಚೇತನ್ ಶಿವಪ್ಪ. ಎ	S/oಶಿವಪ್ಪ.ಆರ್, ಪೋಲಿಸ್ ಠಾಣೆ, ಹಿಂಭಾಗ, ಮೀನುಪೇಟೆ, ವಿರಾಜಪೇಟೆ 9740701410 8904582226	2017–18	ಕಾರ್ಪೋರೇಷನ್ ಬ್ಯಾಂಕ್ ವಿರಾಜಪೇಟೆ ಶಾಖೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
4	ಪ.ಜಾ	ರಾಜು. ಎಂ	S/oಮುತ್ತಾಡಿ, ಅತ್ತೂರು ನಲ್ಲೂರು ಗ್ರಾಮ, ಕಂಬಿಬಾಣೆ ಅಂಚೆ, 7ನೇ ಹೊಸಕೋಟೆ, ಶುಂಠಿಕೊಪ್ಪ, ಸೋಮವಾರಪೇಟೆ ತಾಲ್ಲೂಕು 9483843942	2017–18	ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಸುಂಟಿಕೊಪ್ಪ ಶಾಖೆ, ಸೋಮವಾರಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
5	ಪ.ಜಾ	ಅರಿಂಜಯ ಹೆಚ್.ಜಿ	S/oಜಯಪ್ಪ. ಎಸ್.ಬಿ, ಹಾನಗಲ್ ಗ್ರಾಮ & ಅಂಚೆ ಸೋಮವಾರಪೇಟೆ 9945042405	2017–18	ಕರ್ನಾಟಕ ಬ್ಯಾಂಕ್, ಸೋಮವಾರಪೇಟೆ	ಸಮಾಜ ಕಲ್ಯಾಣ ಇಲಾಖೆ–ಸೋಮವಾರಪೇಟೆ
6	ಪ.ಜಾ	ಚೇತನ್ ಟಿ.ಎಂ	S/oಎಚ್. ಬಿ ಮೋಹನ್ ತಾಕೇರಿ ಗ್ರಾಮ & ಅಂಚೆ ಸೋಮವಾರಪೇಟೆ ತಾಲ್ಲೂಕು 8861427927	2017–18	ಕರ್ನಾಟಕ ಬ್ಯಾಂಕ್ ಸೋಮವಾರಪೇಟೆ	ಟ್ಯಾಕ್ಸಿ–ಊಬರ್ ಬೆಂಗಳೂರು
7	ಪ.ಜಾ	ಪ್ರದೀಪ್ ಕುಮಾರ್.ಕೆ.ಬಿ	S/oಪೌತಿ ಬೇಲೂರಯ್ಯ, 4ನೇ ಬ್ಲಾಕ್, ಕೈಗಾರಿಕಾ ಬಡಾವಣೆ, ಕೊಡಗು ನಿರ್ಮಿತಿ ಕೇಂದ್ರ ಹತ್ತಿರ, ಕುಶಾಲನಗರ ಸೋಮವಾರಪೇಟೆ ತಾಲ್ಲೂಕು 7795914477	2017–18	ಕೆನರಾ ಬ್ಯಾಂಕ್, ಕುಶಾಲನಗರ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
8	ಪ.ಜಾ	ಅಜಿತ್‌ಬೋಜ ಹೆಚ್.ಬಿ (2018–19ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ್ದು, 2017–18ನೇ ಸಾಲಿನಲ್ಲಿ ಹಿಂಬಾಕಿ ಪ್ರಕರಣದಲ್ಲಿ ಆಯ್ಕೆ)	ತಂದೆ: ಬೋಜ ಹೆಚ್.ಎಸ್ ಕಾಂತೂರು ಗ್ರಾಮ, ಮೂರ್ನಾಡು ಅಂಚೆ, ಮಡಿಕೇರಿ 974916132	2017-18	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೂರ್ನಾಡು ಶಾಖೆ, ಮಡಿಕೇರಿ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
9	ಪ.ಪಂ	ಗುಲಾಬಿ ಬಿ.	W/o ಪದ್ಮಯ್ಯ ಎಮ್. ಆರ್ ಹೆಬ್ಬೆಟ್ಟಗೇರಿ ಗ್ರಾಮ, ಕೆ. ನಿಡುಗಣೆ ಅಂಚೆ ಮಡಿಕೇರಿ 9482941769	2017–18	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾಲೇಜು ರಸ್ತೆ, ಮಡಿಕೇರಿ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ ಬೆಂಗಳೂರು

10	ಪ.ಪಂ	ಮಂಜು.ಪಿ.ಬಿ	S/o ಬಾಚ, ಹೊಸಳ್ಳಿ ತೋಟ, ಹೆಬ್ಬಾಲೆ ಭದ್ರಗೊಳ ಗ್ರಾಮ, ದೇವರಪುರ, ವಿರಾಜಪೇಟೆ ತಾಲ್ಲೂಕು. 9845076516	2017-18	ವಿಜಯಾ ಬ್ಯಾಂಕ್, ಪಾಲಿಬೆಟ್ಟ ಶಾಖೆ, ವಿರಾಜಪೇಟೆ ತಾಲ್ಲೂಕು	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
11	ಪ.ಪಂ	ರಾಚ.ವೈ.ಎಂ	S/o ವೈಸಿ ಮುತ್ತ, ಚೆನ್ನಂಗಿ ಗ್ರಾಮ, ಚೆನ್ನಯ್ಯನ ಕೋಟೆ ಅಂಚೆ, ಪಾಲಿಬೆಟ್ಟ, ವಿರಾಜಪೇಟೆ ತಾಲ್ಲೂಕು 9740239985	2017-18	ವಿಜಯಾ ಬ್ಯಾಂಕ್ ಪಾಲಿಬೆಟ್ಟ ಶಾಖೆ.	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
12	ಪ.ಪಂ	ಧನಲಕ್ಷ್ಮಿ.ಕೆ.ಸಿ	S/o ಪೌತಿ ಚೆನ್ನಪ್ಪ ನಾಯಕ, ಕೂಡ್ಲುರು ಗ್ರಾಮ, ಮುಳ್ಳುಸೋಗೆ ಅಂಚೆ, ಕುಶಾಲನಗರ, ಸೋಮವಾರಪೇಟೆ ತಾಲ್ಲೂಕು. 9844404062	2017-18	ಕೆನರಾ ಬ್ಯಾಂಕ್ ಕೂಡಿಗೆ ಶಾಖೆ, ಸೋಮವಾರಪೇಟೆ	ಟ್ಯಾಕ್ಸಿ- ಊಬರ್ ಬೆಂಗಳೂರು
13	ಒಬಿಸಿ	ಆರ್.ಓ ನವೀನ್ ಕುಮಾರ್	ಆರ್.ಎಚ್.ಓಂ ಪ್ರಕಾಶ್, ವಡೆಯನಪುರ ಗ್ರಾಮ, ಗೋಪಾಲಪುರ ಅಂಚೆ, ಶನಿವಾರಸಂತೆ ಹೋಬಳಿ, ಸೋಮವಾರಪೇಟೆ ತಾಲ್ಲೂಕು. 9480788754	2017-18	ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸೋಮವಾರಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
14	ಒಬಿಸಿ	ಬಿ.ಕೆ ಸಂತೋಷ್	ಕೃಷ್ಣಪ್ಪ ಪೂಜಾರಿ, ಗಂಗಂದೂರು ಗ್ರಾಮ, ಕುಂಬುರು ಅಂಚೆ, ಸೋಮವಾರಪೇಟೆ. 9483303852	2017-18	ಕಾರ್ಪೋರೇಷನ್ ಬ್ಯಾಂಕ್ ಸುಂಟಿಗೊಪ್ಪ ಶಾಖೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
15	ಒಬಿಸಿ	ಯೊನಸ್ ಪಿ.ಎಂ	ಮಹಮ್ಮದ್ ಆಲಿ ಪಿ.ಎಂ, ಎಫ್.ಎಂ.ಸಿ ರಸ್ತೆ, ನಾಪೋಕ್ಲು ಮಡಿಕೇರಿ ತಾಲ್ಲೂಕು 9108732006	2017-18	ಇಂಡಿಯನ್ ಓವರ್ ಸೀಸ್ ಬ್ಯಾಂಕ್, ನಾಪೋಕ್ಲು ಶಾಖೆ, ಮಡಿಕೇರಿ	ಟ್ಯಾಕ್ಸಿ – ಏರ್‌ಪೋರ್ಟ್ ಬೆಂಗಳೂರು
16	ಒಬಿಸಿ	ಕಲಂದರ್ ಶಫಿ	ಮೂಸ ಕುಟ್ಟಿ, ಭಜೆಗುಂಡಿ, ಬಳಗುಂದ, ಕುಸುಬುರು ಅಂಚೆ, ಸೋಮವಾರಪೇಟೆ ತಾಲ್ಲೂಕು. 8105048916	2017-18	ವಿಜಯಾ ಬ್ಯಾಂಕ್ ನಗರೂರು ಶಾಖೆ, ಸೋಮವಾರಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
17	ಒಬಿಸಿ	ಕೆ.ಎ ಭುವನೀತ್	ಕೆ.ಎಸ್.ಆನಂದ್, ವಿಶ್ವೇಶ್ವರ ಕೃಪ, #20/32(1), ದೇಚೂರು, ಮಡಿಕೇರಿ 8971302190	2017-18	ಕೆನರಾ ಬ್ಯಾಂಕ್ ಮುಖ್ಯ ಶಾಖೆ, ಮಡಿಕೇರಿ	ಟ್ಯಾಕ್ಸಿ- ಮೈಸೂರು
18	ಒಬಿಸಿ	ಪುಟ್ಟರಾಜು ಡಿ.ಕೆ	ಕೃಷ್ಣೆ ಗೌಡ, ದೊಡ್ಡತ್ತುರು ಗ್ರಾಮ, ಕೂಡುಮಂಗಳೂರು ಅಂಚೆ, ಕುಶಾಲನಗರ ಹೋಬಳಿ, ಸೋಮವಾರಪೇಟೆ ತಾಲ್ಲೂಕು 9741201743 9482058838	2017-18	ಕಾರ್ಪೋರೇಷನ್ ಬ್ಯಾಂಕ್ ಕೂಡುಮಂಗಳೂರು ಶಾಖೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
19	ಒಬಿಸಿ	ಶಿಜೋಯ್ ಜಾರ್ಜ್ ಸಿ.ಎ	ಸಿ.ಜೆ ಅಂತೋಣಿ, ನೆಹರು ನಗರ ವಿರಾಜಪೇಟೆ ತಾಲ್ಲೂಕು. 9483835519	2017-18	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿರಾಜಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
20	ಒಬಿಸಿ	ರವಿ ಜಿ (2018-19ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ್ದು, 2017-18ನೇ ಸಾಲಿನಲ್ಲಿ ಹಿಂಬಾಕಿ ಪ್ರಕರಣದಲ್ಲಿ ಆಯ್ಕೆ)	ತಂದೆ:ಬಿ.ಆರ್ ಗೋಪಾಲ ಚಿಕ್ಕ ಬೆಟ್ಟಗೇರಿ ಗ್ರಾಮ, ಗುಡ್ಡೆಹೊಸೂರು ಅಂಚೆ, ಕುಶಾಲನಗರ, ಸೋಮವಾರಪೇಟೆ ತಾಲ್ಲೂಕು 9483839911	2017-18	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಟೌನ್ ಶಾಖೆ, ಮಡಿಕೇರಿ.	ಸರ್ಕಾರಿ ಇಲಾಖೆ- ಮೆಸ್ಕಂ

21	ಒಬಿಸಿ	ಪ್ರಕಾಶ್ ಕೆ.ಪಿ (2018–19ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ್ದು, 2017–18ನೇ ಸಾಲಿನಲ್ಲಿ ಹಿಂಬಾಕಿ ಪ್ರಕರಣದಲ್ಲಿ ಆಯ್ಕೆ)	ತಂದೆ: ಲೇಟ್ ಪ್ರಭಾಕರ್ ಕಟ್ಟೆಮಾಡು ಗ್ರಾಮ ಮತ್ತು ಅಂಚೆ, ಮೂರ್ನಾಡು ಮಡಿಕೇರಿ 8861981776 9535032719	2017–18	ಬ್ಯಾಂಕ್ ಆಫ್ ಮಹಾರಾಷ್ಟ್ರ, ಮೂರ್ನಾಡು ಶಾಖೆ, ಮಡಿಕೇರಿ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
22	ಒಬಿಸಿ	ಶರತ್ ಕೆ.ಯಂ (2018–19ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ್ದು, 2017–18ನೇ ಸಾಲಿನಲ್ಲಿ ಹಿಂಬಾಕಿ ಪ್ರಕರಣದಲ್ಲಿ ಆಯ್ಕೆ)	ತಂದೆ: ಮಹದೇವ ಕೆ.ಪಿ ಪದಕಲ್ಲು ಗ್ರಾಮ, ಚೆಟ್ಟಿಮಾನಿ ಅಂಚೆ, ಮಡಿಕೇರಿ ತಾಲ್ಲೂಕು, 9480290775	2017–18	ಕಾವೇರಿ ಗ್ರಾಮೀಣ ಬ್ಯಾಂಕ್ ಚೆಟ್ಟಿಮಾನಿ ಶಾಖೆ, ಮಡಿಕೇರಿ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
23	ಒಬಿಸಿ	ಸಜಿತ್ ಕುಮಾರ್ ಎಸ್ (2018–19ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ್ದು, 2017–18ನೇ ಸಾಲಿನಲ್ಲಿ ಹಿಂಬಾಕಿ ಪ್ರಕರಣದಲ್ಲಿ ಆಯ್ಕೆ)	ತಂದೆ:ಸೋಮಶೇಖರ್ #9 ಬ್ಲಾಕ್, ಕಾನ್ವೆಂಟ್ ಜಂಕ್ಷನ್, ಮಡಿಕೇರಿ 7353914435	2017–18	ಬ್ಯಾಂಕ್ ಆಫ್ ಇಂಡಿಯಾ, ಮಡಿಕೇರಿ ಶಾಖೆ, ಮಡಿಕೇರಿ.	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
24	ಒಬಿಸಿ	ಹೆಚ್.ಎಸ್ ಬಸವರಾಜು (2018–19ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ್ದು, 2017–18ನೇ ಸಾಲಿನಲ್ಲಿ ಹಿಂಬಾಕಿ ಪ್ರಕರಣದಲ್ಲಿ ಆಯ್ಕೆ)	ತಂದೆ: ಹೆಚ್.ಎನ್ ಸತೀಶ್ ಕಾಸಲಗೋಡು ಬೀದಿ, ಹೆಬ್ಬಾಲೆ ಗ್ರಾಮ ಮತ್ತು ಅಂಚೆ, ಕುಶಾಲನಗರ ಹೋಬಳಿ ಸೋಮವಾರಪೇಟೆ ತಾಲ್ಲೂಕು. 8217470830	2017–18	ಕೆನರಾ ಬ್ಯಾಂಕ್ ಹೆಬ್ಬಾಲೆ ಶಾಖೆ, ಸೋಮವಾರಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
25	ಪ.ಜಾ	ಜೀವನ್ ಕುಮಾರ್ ಜಿ	ತಂದೆ:ಗಣೇಶ್ ಎಂ, 8ನೇ ಕ್ರಾಸ್, ಮಲ್ಲಿಕಾರ್ಜುನ ನಗರ, ಮುತ್ತಪ್ಪ ದೇವಸ್ಥಾನದ ಹತ್ತಿರ, ಮಡಿಕೇರಿ 8105146225	2018–19	ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ, ಮಡಿಕೇರಿ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
26	ಪ.ಜಾ	ಪ್ರತಿಪ ಹೆಚ್. ಎಲ್	ತಂದೆ: ಲಿಂಗಪ್ಪ ಹೆಚ್.ಎಂ, ಹೆರವನಾಡು ಗ್ರಾಮ, ಅಪ್ಪಂಗಳ ಅಂಚೆ, ಮಡಿಕೇರಿ 9591781676 8861893379	2018–19	ಕಾರ್ಪೋರೇಷನ್ ಬ್ಯಾಂಕ್, ಬೆಟ್ಟಗೇರಿ ಶಾಖೆ, ಮಡಿಕೇರಿ.	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
27	ಪ.ಜಾ	ಸುಬ್ರಮಣ್ಯ ಎಮ್.ಎನ್	ತಂದೆ: ಲೇಟ್ ನಿರುವಣಪ್ಪ ಹೆಚ್.ಪಿ, ಮಲ್ಲೇನಹಳ್ಳಿ ಗ್ರಾಮ, ಮಾದಲಪುರ ಅಂಚೆ, ಕುಶಾಲನಗರ ಹೋಬಳಿ, ಸೋಮವಾರಪೇಟೆ 9845826751	2018–19	ಕೆನರಾ ಬ್ಯಾಂಕ್, ಕೂಡಿಗೆ ಶಾಖೆ, ಸೋಮವಾರಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
28	ಪ.ಜಾ	ಶಂಕರ್ ಕೆ.	ತಂದೆ:ಕಾಳಯ್ಯ ಡಿ. ಬಸವತ್ತೂರು ಗ್ರಾಮ, ಕೂಡುಮಂಗಳೂರು ಅಂಚೆ, ಕುಶಾಲನಗರ ಹೋಬಳಿ, ಸೋಮವಾರಪೇಟೆ 9740983639	2018–19	ಕರ್ನಾಟಕ ಬ್ಯಾಂಕ್, ಕೂಡಿಗೆ ಶಾಖೆ, ಸೋಮವಾರಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
29	ಪ.ಜಾ	ರಾಜಮುಡಿ ಎಂ.ಎನ್	ತಂದೆ: ನಾರಾಯಣ ಮರೂರು ಗ್ರಾಮ, ಹೆಬ್ಬಾಲೆ ಅಂಚೆ, ಕುಶಾಲನಗರ ಹೋಬಳಿ, ಸೋಮವಾರಪೇಟೆ ತಾಲ್ಲೂಕು	2018–19	ಕೆನರಾ ಬ್ಯಾಂಕ್ ಕೂಡಿಗೆ ಶಾಖೆ, ಸೋಮವಾರಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ ಮತ್ತು ಶಾಲೆ

			9740036394 9880614855			ಬಾಡಿಗೆ
30	ಪ.ಜಾ	ಶಕ್ತಿವೇಲ್ ಆರ್	ತಂದೆ:ರಾಜಮಾಣಿಕ್ಯಂ ಎಂ, ಮೇಕೂರು ಹೊಸ್ಕೇರಿ ಗ್ರಾಮ, ಪಾಲಿಬೆಟ್ಟ ಅಂಚೆ, ವಿರಾಜಪೇಟೆ ತಾಲ್ಲೂಕು 9482948476	2018–19	ವಿಜಯಾ ಬ್ಯಾಂಕ್, ಪಾಲಿಬೆಟ್ಟ ಶಾಖೆ, ವಿರಾಜಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
31	ಪ.ಜಾ	ಸಿದ್ಧರಾಜು ಜಿ	ತಂದೆ: ಗೋವಿಂದಯ್ಯ ಮೈಲಾತ್ ಪುರ ಎಸ್ಟೇಟ್, ಮಾಲ್ದರೆ ಅಂಚೆ ಮತ್ತು ಗ್ರಾಮ, ವಿರಾಜಪೇಟೆ ತಾಲ್ಲೂಕು. 9945491625	2018–19	ಕೆನರಾ ಬ್ಯಾಂಕ್, ಸಿದ್ದಾಪುರ ಶಾಖೆ, ವಿರಾಜಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
32	ಪ.ಪಂ	ತೇಜಸ್ ಹೆಚ್.ಡಿ,	ತಂದೆ: ಹೆಚ್.ಎಮ್ ಡಿಕ್ಕಿ, ಕಿರೂರು ಗ್ರಾಮ ಮತ್ತು ಅಂಚೆ, ವಿರಾಜಪೇಟೆ 9482870594	2018–19	ಕಾವೇರಿ ಗ್ರಾಮೀಣ ಬ್ಯಾಂಕ್ ಕಿರಗೂರು ಶಾಖೆ, ವಿರಾಜಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
33	ಪ.ಪಂ	ದೇವೋಜಿ. ಎಸ್	ತಂದೆ: ಶಿಶೋಜಿ ಕೆ.ಎಮ್, ಕೊಡವರಹಳ್ಳಿ ಗ್ರಾಮ ಮತ್ತು ಅಂಚೆ, ಸೋಮವಾರಪೇಟೆ 9663106677	2018–19	ಬ್ಯಾಂಕ್ ಆಫ್ ಇಂಡಿಯಾ, ಮಡಿಕೇರಿ ಶಾಖೆ, ಮಡಿಕೇರಿ	ಟ್ಯಾಕ್ಸಿ / ಊಬರ್ ಕಂಪೆನಿ ಬೆಂಗಳೂರು
34	ಪ.ಪಂ	ಕೆ.ಕೆ ಗಣೇಶ್ (2018–19ನೇ ಸಾಲಿನ ಯೋಜನೆಯಲ್ಲಿ ಪರಿಗಣಿಸಲಾಗಿದೆ. 2019–20ನೇ ಸಾಲಿನ ಅರ್ಹ ಅಭ್ಯರ್ಥಿ)	ತಂದೆ:ಕುಕ್ಕಪ್ಪ ಕೆ.ಪಿ 2ನೇ ಮೊಣ್ಣಂಗೇರಿ ಗ್ರಾಮ, ಮದೆ ಅಂಚೆ, ಮಡಿಕೇರಿ	2018–19	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಡಿಕೇರಿ ಟೌನ್ ಶಾಖೆ, ಮಡಿಕೇರಿ.	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
35	ಒಬಿಸಿ	ನಿತೀನ್ ಬಿ.ಎಂ	ತಂದೆ: ಬಿ.ಕೆ ಮಾಣಪ್ಪ ಹಾಕತ್ತೂರು ಗ್ರಾಮ ಮತ್ತು ಅಂಚೆ, ಮಡಿಕೇರಿ 9483620428	2018–19	ಕಾವೇರಿ ಗ್ರಾಮೀಣ ಬ್ಯಾಂಕ್ ಹಾಕತ್ತೂರು ಶಾಖೆ, ಮಡಿಕೇರಿ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
36	ಒಬಿಸಿ	ಹರೀಶ್ ಎಸ್.ಎಲ್	ತಂದೆ:ಲಕ್ಷ್ಮಣ ಶೆಟ್ಟಿ ಬಿ.ಎಸ್ #109, 4ನೇ ಬ್ಲಾಕ್, ನೀಲಕಂಠೇಶ್ವರ ಬಿಲ್ಡಿಂಗ್, ಹಿಲ್ ರಸ್ತೆ, ಮಡಿಕೇರಿ. 9036911930	2018–19	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಟೌನ್ ಶಾಖೆ, ಮಡಿಕೇರಿ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
37	ಒಬಿಸಿ	ಎಮ್.ಐ ಮಾನ್ಸೂರ್	ತಂದೆ:ಇಕ್ಬಲ್ ಚಾಮುಂಡೇಶ್ವರಿ ನಗರ ಅಂಗನವಾಡಿ ಹತ್ತಿರ ತಾಳತ್ತ್‌ಮನೆ ಅಂಚೆ, ಮಡಿಕೇರಿ 8970001053	2018–19	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾಲೇಜು ರಸ್ತೆ, ಮಡಿಕೇರಿ	ಟ್ಯಾಕ್ಸಿ/ ಏಜೆನ್ಸಿ
38	ಒಬಿಸಿ	ಭಾನುಪ್ರಕಾಶ್ ಕೆ.ಪಿ	ತಂದೆ: ಪೊನ್ನಪ್ಪ ಕೆ.ಪಿ, ಅಬ್ಬಿಮಠ ರಸ್ತೆ, ಯಡೂರು ಗ್ರಾಮ, ಹಾನಗಲ್ಲು ಅಂಚೆ, ಸೋಮವಾರಪೇಟೆ ತಾಲ್ಲೂಕು 9449998577	2018–19	ವಿಜಯಾ ಬ್ಯಾಂಕ್ ನಗರೂರು ಶಾಖೆ, ಸೋಮವಾರಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ ಮತ್ತು ಶಾಲಾ ಬಾಡಿಗೆ
39	ಒಬಿಸಿ	ಸ್ಟೀವನ್ ಡಿಸೋಜ	ತಂದೆ: ಪೌಲ್ ಡಿಸೋಜ ಮೇಕೇರಿ ಗ್ರಾಮ, ಕಗ್ಗೋಡ್ಲು ಅಂಚೆ, ಮಡಿಕೇರಿ 9449609273	2018–19	ಕರ್ನಾಟಕ ಬ್ಯಾಂಕ್ ಮಡಿಕೇರಿ ಶಾಖೆ, ಮಡಿಕೇರಿ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
40	ಒಬಿಸಿ	ಪ್ರತಾಪ್ ಕೆ.ಎಸ್	ತಂದೆ:ಕೆ.ಪಿ ಸೋಮಶೇಖರ್	2019–20	ವಿಜಯಾ ಬ್ಯಾಂಕ್,	ಪ್ರವಾಸಿ

40	೭.ಬಿಸಿ	ಪ್ರತಾಪ್ ಕೆ.ಎಸ್	ತಂದೆ:ಕೆ.ಪಿ ಸೋಮಶೇಖರ್ ಕೆಂಚಮ್ಮನ ಬಾಣೆ ಕುಸುಬೂರು ಗ್ರಾಮ ಮತ್ತು ಅಂಚೆ. ಸೋಮವಾರಪೇಟೆ	2019-20	ವಿಜಯಾ ಬ್ಯಾಂಕ್, ನಗರೂರು ಶಾಖೆ, ಸೋಮವಾರಪೇಟೆ ತಾಲ್ಲೂಕು,	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
41	ಒಬಿಸಿ	ಮಣಿಕಂಠ ಕೆ.ಎನ್	ತಂದೆ: ನಾರಾಯಣ ಕೆ ಕಾರೇಕೊಪ್ಪ, ಬೆಳೂರು ಬಸವನಹಳ್ಳಿ ಗ್ರಾಮ, ಸೋಮವಾರಪೇಟೆ	2019-20	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸೋಮವಾರಪೇಟೆ ಶಾಖೆ, ಸೋಮವಾರಪೇಟೆ.	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
42	ಒಬಿಸಿ	ತಹಾಸೀನ್ ಎಂ.ಬಿ	ತಂದೆ: ಬಾಷಾ ಎಂ.ಡಿ #2/81 ಆಲೆಕಟ್ಟೆ ರಸ್ತೆ, ಚೌಡ್ಲು ಗ್ರಾಮ, ಸೋಮವಾರಪೇಟೆ	2019-20	ಕೆನರಾ ಬ್ಯಾಂಕ್, ಸೋಮವಾರಪೇಟೆ ಶಾಖೆ, ಸೋಮವಾರಪೇಟೆ.	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
43	ಒಬಿಸಿ	ಜಯಕುಮಾರ್ ಕೆ.ಈ	ತಂದೆ: ಕೆ.ಎಲ್ ಈಶ್ವರ ಮಕ್ಕಂದೂರು ಗ್ರಾಮ ಮತ್ತು ಅಂಚೆ, ಮಡಿಕೇರಿ	2019-20	ಕೆನರಾ ಬ್ಯಾಂಕ್, ಮಕ್ಕಂದೂರು ಶಾಖೆ, ಮಡಿಕೇರಿ.	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
44	ಒಬಿಸಿ	ನವೀನ್ ಕೆ.ಪಿ	ತಂದೆ: ಪುಟ್ಟಸ್ವಾಮಿ ಚಿಕ್ಕತ್ತೂರು ಗ್ರಾಮ, ಕೂಡುಮಂಗಳೂರು ಅಂಚೆ, ಸೋಮವಾರಪೇಟೆ	2019-20	ಕೆನರಾ ಬ್ಯಾಂಕ್, ಕೂಡಿಗೆ ಶಾಖೆ, ಸೋಮವಾರಪೇಟೆ.	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
45	ಪ.ಜಾ	ಶ್ರೀಕಾಂತ್ ಆರ್	ತಂದೆ: ಪಿ.ಎಸ್.ರಾಜು, ಮಂಗಳಾದೇವಿ ನಗರ, ಮಡಿಕೇರಿ	2019-20	ಕೆನರಾ ಬ್ಯಾಂಕ್, ಮಡಿಕೇರಿ ಮುಖ್ಯ ಶಾಖೆ, ಮಡಿಕೇರಿ.	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
46	ಪ.ಜಾ	ದೇವಪ್ಪ ಹೆಚ್.ವಿ	ತಂದೆ:ಹೆಚ್.ಎಸ್ ವೆಂಕಟೇಶ್ #251-4, ರಾಧಕೃಷ್ಣ ಬಡಾವಣೆ, ಪೋಲಿಸ್ ಸ್ಟೇಷನ್ ಹತ್ತಿರ, ಕುಶಾಲನಗರ ಹೋಬಳಿ, ಸೋಮವಾರಪೇಟೆ ತಾಲ್ಲೂಕು	2019-20	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕುಶಾಲನಗರ ಶಾಖೆ, ಸೋಮವಾರಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
47	ಪ.ಜಾ	ಪ್ರಥ್ವಿನ್ ಕುಮಾರ್ ಹೆಚ್.ಹೆಚ್	ತಂದೆ: ಹೆಚ್.ಎನ್ ಹೂವಯ್ಯ, ಬಿಳೂರು ಗ್ರಾಮ, ಪೊನ್ನಪ್ಪಸಂತೆ ಅಂಚೆ, ಬಾಳೆಲೆ ಹೋಬಳಿ, ವಿರಾಜಪೇಟೆ	2019-20	ಕೆನರಾ ಬ್ಯಾಂಕ್, ಬಾಳೆಲೆ ಶಾಖೆ, ವಿರಾಜಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ
48	ಪ.ಪಂ	ಚಂದ್ರ	ತಂದೆ: ವೆಂಕಟನಾಯ್ಕ, 4ನೇ ಬ್ಲಾಕ್ ಹೌಸಿಂಗ್ ಬೋರ್ಡ್,ಕುಶಾಲನಗರ ಹೋಬಳಿ, ಸೋಮವಾರಪೇಟೆ ತಾಲ್ಲೂಕು.	2019-20	ಕಾರ್ಪೋರೇಷನ್ ಬ್ಯಾಂಕ್, ಕುಶಾಲನಗರ ಶಾಖೆ, ಸೋಮವಾರಪೇಟೆ	ಪ್ರವಾಸಿ ಟ್ಯಾಕ್ಸಿಯಾಗಿ ಬಳಕೆ